**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ ಇವರ ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:**

ಇತ್ತೀಚಿನ ದಿನಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳು ಹೆಚ್ಚಾಗಿದ್ದು, ನಗರದಿಂದ ಹೊರಭಾಗಕ್ಕೆ ದಿನನಿತ್ಯ ಅನೇಕ ಜನರು ಪಟ್ಟಣದಿಂದ ಹಾದುಹೋಗಬೇಕಾಗಿರುತ್ತದೆ. ಆದ್ದರಿಂದ, ಜನರ ಉಪಯೋಗಕ್ಕಾಗಿ ಹೊರ ವರ್ತುಲ ರಸ್ತೆಯ ನಿರ್ಮಾಣ ಅಗತ್ಯವಾಗಿದ್ದು, ಇರುವಂತಹ ಹೊರವರ್ತುಲ ರಸ್ತೆಯಿಂದ ಜನರಿಗೆ ಪ್ರಯೋಜನಕಾರಿಯಾದ ಉಪಯೋಗವಾಗದೆ ಇರುವುದರಿಂದ ಕೋಲಾರ ನಗರದಲ್ಲಿ ಹೊಸದಾಗಿ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಸರ್ಕಾರದಿಂದ ಹೊಸ ಯೋಜನೆಯನ್ನು ರೂಪಿಸಿ ಅತ್ಯಂತ ಜರೂರಾಗಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಕುರಿತು ನೀಡಿರುವ ಸೂಚನೆ ಬಗ್ಗೆ.

**ಉತ್ತರ:**

ನಗರ ಪ್ರದೇಶಗಳಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಲು ಮಾಲೂರು ರಸ್ತೆಯಿಂದ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ, ಅಂತರಗಂಗೆ ರಸ್ತೆಯಿಂದ-ಖಾದ್ರಿಪುರ ರಸ್ತೆ, ಚಿಕ್ಕಬಳ್ಳಾಪುರ ರಾಜ್ಯ ಹೆದ್ದಾರಿ ಹಾಗೂ ಚಿಂತಾಮಣಿ ರಾಜ್ಯ ಹೆದ್ದಾರಿಗೆ, ಶ್ರೀನಿವಾಸಪುರ ರಾಜ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಹೊರ ವರ್ತುಲ ರಸ್ತೆಯ ಪ್ರಸ್ತಾಪ ಮಾಡಲಾಗಿರುತ್ತದೆ.

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶಕ್ಕೆ ದಿನಾಂಕ:09.08.2010 ರಂದು ಮಹಾಯೋಜನೆ ಅನುಮೋದನೆಯಾಗಿದ್ದು, ಸದರಿ ಅನುಮೋದಿತ ಮಹಾಯೋಜನೆಯಲ್ಲಿ ಹೊರ ವರ್ತುಲ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಹೊರ ವರ್ತುಲ ರಸ್ತೆಯನ್ನು ಅಭಿವೃದ್ಧಿಪಡಿಸಲು ಒಟ್ಟು ಮೌಲ್ಯ ರೂ. 80,37,86,112/-ಗಳನ್ನು ಅಂದಾಜಿಲಾಗಿದೆ.

ಆದರೆ, ಪ್ರಸ್ತಾಪಿತ ಹೊರ ವರ್ತುಲ ರಸ್ತೆಯು 2010 ನೇ ಸಾಲಿನ ಮಹಾಯೋಜನೆಯಲ್ಲಿ ಅಳವಡಿಸಲಾಗಿರುವುದರಿಂದ ನಗರದ ಬೆಳವಣಿಗೆ ಮತ್ತು ಅಭಿವೃದ್ಧಿಯಿಂದ ಪ್ರಸ್ತಾಪಿತ / ಉದ್ದೇಶಿತ ಹೊರ ವರ್ತುಲ ರಸ್ತೆಯು ನಗರದ ಮಧ್ಯೆ ಹಾದು ಹೋಗುವುದರಿಂದ ಉದ್ದೇಶಿತ ಕಾಮಗಾರಿ / ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಮುಂಬರುವ ಮಹಾಯೋಜನೆ ಪರಿಷ್ಕರಣೆಯಲ್ಲಿ ಹೊರವರ್ತುಲ ರಸ್ತೆಯ ಹೊಸ ಪ್ರಸ್ತಾವನೆಯನ್ನು ಪರಿಷ್ಕರಿಸಿ ಮಹಾಯೋಜನೆಯಲ್ಲಿ ಅಳವಡಿಸಿದ ನಂತರ ಅನುಮೋದನೆ ನೀಡಿ ಅಭಿವೃದ್ಧಿಪಡಿಸಲಾಗುವುದು.

**ಸಂಖ್ಯೆ: ನಅಇ 66 ಎಲ್ ಸಿಕ್ಯೂ 2022**

**(ಬಿ.ಎ. ಬಸವರಾಜು)**
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**